Doc-496
T-P-2

Reg no KRN 12 - For Influential Publicity - 23-11-76

ಸ್ವರ್ಗೀಯ ಮಹೋತ್ಸವ ನೆರವೇರಿಸಿ ವಜ್ರಮಹೋತ್ಸವ ನೇರವೇರಿಸಲಿರುವ ಪತ್ರಿಕೆ

ಸತ್ಯವಾದಿ
SATYAVADI

60th Diamond Jubilee Year
ನೇ ವಜ್ರಮಹೋತ್ಸವ ವರ್ಷ
★ Satyavadi Daily Mysore 4 ★

ಸ್ಥಾಪಕರು : ಆರೆಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ 5 ಪೈಸೆ

ಸ್ವರ್ಗೀಯ ಕೂಗಿಗಾಗಿ ಕುಟುಂಬವನ್ನು ವಧಿಸಿದ

ನವ ದೆಹಲಿ — ಪಾಕಿಸ್ತಾನದ ಟ್ರಾಬ್ಲೆಲಾದ ನಲವತ್ತು ವರ್ಷದ ಮುಹಮ್ಮದ್ ಯಾಕೂಬ್‌ಗೆ ಬಲಿ ಕೊಡು ಏ ಬ ಸ್ವರ್ಗದ ಕೂಗಾ ಕೇಳಿ ತೆಂಪೂ, ಆದ ಕ್ಕಾಗಿ ತನ್ನ ಹೆಂಡತಿ ಮತ್ತು ಮೂರು ವರ್ಷದ ಮಗುವನ್ನು ಸೋಮವಾರ ಕಾತ್ರಿ ವಧಿಸಿ ತನ್ನ ಪತ್ನ ಹೆಂಡತಿಯು ಬಳಿ ಜ್ಞಾನಶೂನ್ಯನಾಗಿ ಬಿದ್ದಿದ್ದನೆಂದೂ, ಪೋಲೀಸರು ಬೆಳಿಗ್ಗೆ ಇವನ ಬಂಧನ ಮಾಡಿದರೆಂದೂ ವರದಿಯಾಗಿದೆ ಇವನಿಗೆ ಎರಡು ಸರ್ಕಾರಗಳಿಂದ ಮೂರ್ಖ ರೋಗ ಇದ್ದಿತೆಂದು ಪೋಲೀಸರು ತಿಳಿಸಿದರು.

○

ಪ್ರಧಾನರವರಿಂದ ವಿದೇಶಗಳಿಗೆ ಎಚ್ಚರಿಕೆ

ಜವಾಹರನಗರ — ವಿದೇಶೀ ಶಕ್ತಿಗಳು ಭಾರತದಿಂದ ಅಚೆ ಕೈ ಇಟ್ಟುಕೊಳ್ಳುವಂತೆ ಎ ಐ ಸಿ ಸಿ ಯಲ್ಲಿ ಪ್ರಧಾನಿ ಇಂದಿರಾ ಗಾಂಧಿಯವರು ತಿಳಿಸಿದರು

○

ಪೂರ್ಣವಾದ ವಿಶ್ವಾಸ ವ್ಯಕ್ತತೆ

ಜವಾಹರನಗರ — ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಹಾಗೂ ಯುವಕ ಕಾಂಗ್ರೆಸ್ ನಾಯಕ ಶ್ರೀ ಸಂಜಯಗಾಂಧಿಯವರ ಮೇಲೆ ಪೂರ್ಣವಿಶ್ವಾಸ ಇಟ್ಟಿರುವುದನ್ನು ಸ್ಥಿರಪಡಿಸಲಾಯಿತು

★

ಕಾಂಗ್ರೆಸ್ ಅಧಿವೇಶನದಲ್ಲಿ ಹರ್ಷೋದ್ಗಾರ ವ್ಯಕ್ತತೆ

ಜವಾಹರ್ ನಗರ — ಅಸ್ಸಾಂ ಹಾಗೂ ನಾಗಾಲ್ಯಾಂಡಿನಲ್ಲಿ ಎಣ್ಣೆ ದೊರೆತಿದೆ ಎಂದು ಎ ಐ ಸಿ ಸಿ ಯಲ್ಲಿ ಪ್ರಧಾನಿ ಇಂದಿರಾರವರು ತಿಳಿಸಿದಾಗ ಸಭೆಯಲ್ಲಿ ಹರ್ಷೋದ್ಗಾರವಾಯಿತು

○

ನಾಯಿಯು ಯಜಮಾನನ್ನು ವಾಪಸಾದನು

ಮಾಸ್ಕೋ — ಇಲ್ಲಿ ವಿಮಾನ ನಿಲ್ದಾಣದಲ್ಲಿ ಕೆಲಕಾಲದ ಹಿಂದೆ ತನ್ನ ನಾಯಿಯನ್ನು ಬಿಟ್ಟುಹೋಗಿದ್ದ ಅದರ ಯಜಮಾನನು ಆಗಮಿಸಿದನು ನಾಯಿಗೆ ಪಟ್ಟೆ ಫಿಕೇಟು ದೊರೆಯದ ಕಾರಣ ನಾಯಿಯನ್ನು ಕರೆದುಕೊಂಡು ಹೋಗಲಾಗಲಿಲ್ಲ ಎಂದು ತಿಳಿಸಿದನು

●

ದಸರಾ ವಸ್ತು ಪ್ರದರ್ಶನ — ಕಾರ್ಯಕ್ರಮಗಳು

25 ನೇ ತಾ 6 ಘಂಟೆ ಪಿ ಎ ನಾಗೇಶ ಪುತ್ತೂರರಿಂದ ಸ್ಯಾಕ್ಸೋಫೋನ್ 7 ಗಂಟೆಗೆ ವಿದ್ವಾನ್ ಪಾರ್ಥಯವರಿಂದ ವಾದ್ಯಗೋಷ್ಠಿ

★

ತಿರುವನಂ — ಇರಾನಿಗೆ ಅಮೇರಿಕದ ಶಸ್ತ್ರಾಸ್ತ್ರಗಳ ಸರಬರಾಜಿನ ಭರವಸೆ ನೀಡಲಾಗಿದೆ.

ಕುರಾನ್ ಪಠಣ ಸ್ಪರ್ಧೆ

ಮೈಸೂರು — ಶ್ರೀರಂಗಪಟ್ಟಣದಲ್ಲಿ ಟಿಪ್ಪು ಸುಲ್ತಾನರ 185 ನೇ ಪುಣ್ಯದಿನ ಸಂದರ್ಭದಲ್ಲಿ ನಡೆಸಿದ ರಾಜ್ಯ ಮಟ್ಟದ ಕುರಾನ ಪಠಣ ಸ್ಪರ್ಧೆಯಲ್ಲಿ ಶ್ರೀ ಅಜೀಜ್ ಸೇಟ್‌ರವರು ಅಧ್ಯಕ್ಷತೆ ವಹಿಸಿದ್ದರು ಮೂವರು ಬಹುಮಾನ ಗಳಿಸಿದರು.

●

ಕೋರ್ಟಿಗೆ ಸಿಂಹ

ನವ ದೆಹಲಿ — ಪ್ರವಾಸಿ ಪ್ರಾಣಿ ಸಂಗ್ರಹಾಲಯದ ತನ್ನ ಹೊಸ ಗೂಂಡ ಸಿಂಹವನ್ನು ರಿಜಿಸ್ಟರ್ ಮಾಡಿಸಿಲ್ಲವೆಂಬ ಅಪವಾದನೆ ಮೇಲೆ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟರ ಮುಂದೆ ಸಿಂಹವು ಹಾಜರುಪಡಿಸಲ್ಪಟ್ಟಿತು ಮ್ಯಾಜಿಸ್ಟ್ರೇಟರವರು ಆದನ್ನು ಕೋರ್ಟಿನ ರೂಂಗೆ ಕರೆದಂತೆ ನೋಡಲು ತಾವೇ ಹೊರಗೆ ಬಂದರು.

★

ಭಾಷಾ ಪತ್ರಿಕೆಗಳ ಸಮ್ಮೇಳನ

ನವ ದೆಹಲಿ — ಕಲ್ಕತ್ತಾದಲ್ಲಿ ತಾರೀಖು 25 ರಿಂದ 3 ದಿನಗಳ ಅಖಿಲ ಭಾರತ ಪತ್ರಿಕಾ ಸಂಮೇಳನ ನಡೆಯುವುದು

★

ರೈಲ್ವೆಗೆ ರೂ 100 ಕಳಿಸಿದ

ಮದರಾಸು — 1950 ರಲ್ಲಿ ರೈಲಿನಲ್ಲಿ ಟಿಕೇಟಿಲ್ಲದೆ ಪ್ರಯಾಣ ಮಾಡಿದ್ದ ರೈಲ್ವೆಯವರಿಗೆ 40 ರೂ ಮೋಸ ಮಾಡಿದ್ದ ಸ್ಯಾಮ್ಯುಯೆಲ್ ಎಂಬಾತನು ರೂ 100 ಕ್ಕೆ ಕ್ರಾಸ್ ಪೋಸ್ಟಲ್ ಆರ್ಡರ್‌ನ್ನು ರೈಲ್ವೆಯವರಿಗೆ ಕಳುಹಿಸಿ, ತಡಗೆ ನಿಜವಾದ ಕ್ರೈಸ್ತಿಯನ್ ಆದನೆನ್ನೆನ್ನು ಅಕ್ಷಸಾಕ್ಷಿ ಕಳಿಸುವಂತೆ ಬಲಾತ್ಕರಿಸಿದೆಂದು ತಿಳಿಸಿರುವನು

★ ಬೆಮೆತಾದಲ್ಲಿ ಭೂ ಪಾತದಿಂದ 9 ಗುಡಿಸಲುಗಳು ನಾಶವಾಗಿ 20 ಮಂದಿ ಮರಣಹೊಂದಿದರು

ಆದಾಯ ತೆರಿಗೆಯವರ ದಾಳಿ

ವೀರಪ್ಪ — ಇಲ್ಲಿಯ ಒಬ್ಬ ಹಣ ನೇರವು ಕೊಡುವವನು, ಲೇವಾದೇವಿ ಮಾಡುವನೆಂಬ ವಾಸಸ್ಥಾನದ ಮೇಲೆ ಮತ್ತು ಡೆಹರಾಡೂನ್, ರಿಷಿಕೇಷ ಮತ್ತು ಮುಸ್ಸೋರಿಯಲ್ಲಿನ ಅವನ ಸಹಾಯಕರ ನಿವಾಸದ ಮೇಲೆ ನಡೆಸಿದ ದಾಳಿಯಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಹಲವು ಲಕ್ಷ ರೂಪಾಯಿಗಳ ಮೌಲ್ಯದ ಆಭರಣ, ಮುಂದಿನ ತಾರೀಖುಗಳ ಚೆಕ್‌ಗಳು ಮತ್ತು ಹಣವನ್ನು ಪತ್ತೆ ಹಚ್ಚಿರುವರು

○

ಐವರ ಮರಣ

ಕೊಯಮುತ್ತೂರು — ಈ ಜಿಲ್ಲೆಯಲ್ಲಿ ಸುರಿದ ಭಾರಿ ಮಳೆಯ ದೆಸೆಯಿಂದ 5 ಮಂದಿ ಸತ್ತು 2 ಸಾವಿರ ಮಂದಿ ನಿರ್ವಾಸಿತರಾಗಿದ್ದಾರೆ.

●

ಉದ್ಘಾಟನೆ

ತಾಯಿಡೂರು — ಪ್ರಧಾನಿ ಇಂದಿರಾರವರನ್ನು ಚಿತ್ರಾಂಬನಿಂದ ಇಂದಿನ ವರೆಗೆ ತಿಳಿಸುವ ಚಿತ್ರಗಳ ಪ್ರದರ್ಶನವನ್ನು ಇಲ್ಲಿ ಉದ್ಘಾಟಿಸಲಾಯಿತು.

★

ಎರಡನೆಯ ಸೋಲು

ಪಾಂಡಿಚೇರಿ — ಇಲ್ಲಿ ನಡೆದ ಟೆನ್ನಿಸ್ ಪಂದ್ಯದಲ್ಲಿ ರಮೇಶ ಕೃಷ್ಣನ್ ತನ್ನ ತಂದೆ ರಾಮನಾಥನ್ ಕೃಷ್ಣನ್‌ನನ್ನು ಸೋಲಿಸಿ ಇದು ತಂದೆಗೆ ಮಗನಿಂದ ಎರಡನೆಯ ಸೋಲು.

★

ಹೆಚ್ಚು ಹಾಲು

ಬೋಬಾಯಿ — ಬೊಂಬಾಯಿಗೆ ಬಹು ಹೆಚ್ಚು ಹಾಲು ದೊರೆಯುತ್ತಿದ್ದು ದಿನವೆಲ್ಲಾ ಸಮೃದ್ಧವಾಗಲ್ಲೇ ಇರುತ್ತದೆ ಜಲರೋಗ ಪಡೆಯುವರು

ಕುಟುಂಬ ಯೋಜನೆ — ಮೈಸೂರು ಜಿಲ್ಲೆಯ ಸಾಧನೆ

ಮೈಸೂರು ಜಿಲ್ಲೆಗೆ ಕುಟುಂಬ ಯೋಜನಾ ಶಸ್ತ್ರ ಚಿಕಿತ್ಸೆಗಾಗಿ 75-76 ನೇ ಸಾಲಿನಲ್ಲಿ ನಿಗದಿಗೊಳಿಸಲಾಗಿದ್ದ 21260 ಶಸ್ತ್ರ ಚಿಕಿತ್ಸೆ ಗುರಿಯನ್ನು ಮೀರಿ ಇದುವರೆಗೆ 21490 ಶಸ್ತ್ರ ಚಿಕಿತ್ಸೆಗಳನ್ನು ಮಾಡಲಾಗಿದೆ ಎಂದು ಜಿಲ್ಲ ವೈದ್ಯ ಮತ್ತು ಕುಟುಂಬ ಯೋಜನಾಧಿಕಾರಿ ಡಾ॥ ಟಿ ಆರ್. ಗೋವಾಲಕೃಷ್ಣರವರು ತಿಳಿಸಿರುವರು. ಗುರಿ ತಲುಪಲು 1977ನೇ ಮಾರ್ಚ್ ತಿಂಗಳ ವರೆಗೆ ಕಾಲಾವಕಾಶವಿತ್ತು.

○

ಸುಧರ್ಮಾ ಪತ್ರಿಕಾಲಯಕ್ಕೆ ಸಂದರ್ಶನ

ಈ ಸಂಜೆ 7 ಗಂಟೆಗೆ ಸುಧರ್ಮಾ ಕಾರ್ಯಾಲಯಕ್ಕೆ ಪ್ರಧಾನರ ಪತ್ರಿಕಾ ಸಲಹೆಗಾರರಾದ ಶ್ರೀ ಹೆಚ್ ವೈ. ಶಾರದಾ ಪ್ರಸಾದ್ ಸಂದರ್ಶನ ಕೊಡುವರು.

ವುಡ್‌ಲಾಂಡ್ 19 11 76 ರಿಂದ

ಅಮೋಘ ಆರಂಭ

ಬಿಡುಗಡೆ

ಡಾ. ರಾಜಕುಮಾರ್ ಭಾರತಿ ಅಶ್ವತ್ಥ್ ನರಸಿಂಹರಾಜು ಅಭಿನಯ

ಕನ್ನಡ

ಕಲರ್

ದಿನ 3 ಪ್ರದರ್ಶನಗಳು

ಅಪೇರಾ 19 11 76ರಿಂದ

ಪ್ರೇಮ ಬಂಧ

ಕಲರ್

ಕೋಬನಬಾಬು ವಾಣಿಶ್ರೀ ಕೃಷ್ಣನಾರಾಯಣ ಅಭಿನಯ

ತೆಲುಗು

ಪ್ರತಿ ದಿನ 3 ಪ್ರದರ್ಶನ

ಭಾರತದಲ್ಲಿ ಗೋವಧೆ

ಪೂರ್ಣ ನಿಷೇಧವಾಗಲಿ

Contribute Liberally to the National Defence Fund

Edited Printed and Published by Dharmapracharanirata M S Krishna Rao (Proprietor) at the Satyavadi Press Chamarajapuram Mysore 4

ಕರ್ನಾಟಕ ಪಿಡಬ್ಲ್ಯುಡಿ

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ನಂ 24/76-77 ತಾರೀಖು 10-11-1976

ಈ ಕೆಳಗೆ ಕಂಡ ಕೆಲಸಗಳಿಗಾಗಿ ಕರ್ನಾಟಕ ಪಿಡಬ್ಲ್ಯುಡಿ ಯಲ್ಲಿ ಸೂಕ್ತ ವರ್ಗದ 1 ವರ್ಗದ ರಿಜಿಸ್ಟರ್ ಆಗಿರುವ ಕಂಟ್ರಾಕ್ಟರ್‌ಗಳಿಂದ ಕೆಲಸದ ಹೆಸರು ಬರೆದ ಟೆಂಡರ್‌ದಾರರಿಂದ ಸಕಾಲದಲ್ಲಿ ಸಹಿ ಮಾಡಲಾದ ಪ್ರತ್ಯೇಕ ಮೊಹರಾದ ಐಟಂ ದರದ ಟೆಂಡರ್‌ಗಳನ್ನು ದ್ವಿಪ್ರತಿಗಳಲ್ಲಿ ಆಹ್ವಾನಿಸಲಾಗಿದೆ ಮತ್ತು ಅವನ್ನು 24-12-1976 ಮಧ್ಯಾಹ್ನ 4 ಗಂಟೆಯ ವರೆಗೆ ಮೈಸೂರು-2 ರಲ್ಲಿರುವ, ಕಬಿನಿ ನಾಲೆ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ಸ್ವೀಕರಿಸುವರು ಕಂಟ್ರಾಕ್ಟರ್ ಅಥವಾ ಅವರ ಅಧಿಕೃತ ಪ್ರತಿನಿಧಿಯ ಮುಂದೆ ಸಾಧ್ಯವಾದರೆ ಅದೇ ದಿನ ಟೆಂಡರ್‌ಗಳನ್ನು ಒಡೆಯಲಾಗುವುದು

2 ವಿಧಾಯಕವಾದ ಖಾಲಿ ಟೆಂಡರ್ ಫಾರಂಗಳನ್ನು ವಿಭಾಗ ಕಚೇರಿಯಲ್ಲಿ ಕಂಟ್ರಾಕ್ಟರ್‌ಗಳಿಗೆ ಕಚೇರಿ ಕೆಲಸದ ವೇಳೆಗಳಲ್ಲಿ 16-12-1976 ರಿಂದ 20-12-1976 ರ ವರೆಗೆ ಸೆಟ್ ಒಂದಕ್ಕೆ ವಿಧಾಯಕವಾಗಿರುವ ಶುಲ್ಕ ರೂ. 309 ಪಾವತಿ ಮಾಡಿದಲ್ಲಿ ಕೊಡಲಾಗುವುದು. ಇದನ್ನು ವಾಪಸು ಮಾಡುವುದಿಲ್ಲ ಅಥವ ವರ್ಗಾವಣೆ ಮಾಡುವುದಿಲ್ಲ.

ಅಂಚೆಯ ಮೂಲಕ ಫಾರಂಗಳು ಬೇಕಾಗಿದ್ದಲ್ಲಿ ಹೆಚ್ಚುವರಿ ರೂ. 10 ನ್ನು ಅಂಚೆಯ ವೆಚ್ಚಕ್ಕಾಗಿ ಮುಂಗಡವಾಗಿ ಪಾವತಿ ಮಾಡಬೇಕು.

3 ಟೆಂಡರ್‌ಗಳನ್ನು ಆಹ್ವಾನಿಸಿರುವ ಹೇಳಲಾದ ಫಾರಂನಲ್ಲಿ ಸ್ಪಷ್ಟ ಪಡಿಸಿರುವ ಪದದಲ್ಲಿ ಯಾವುದೇ ಬದಲಾವಣೆಗಳನ್ನು ಸೂಚಿಸುವ ಅಥವಾ ಕೆಲಸವನ್ನು ಸಾಗಿಸಲು ಅವಕಾಶ ಇರುವ ಕಾಲದಲ್ಲಿ ಯಾವುದೇ ಬದಲಾವಣೆ ಸೂಚಿಸುವ ಅಥವಾ ಯಾವುದೇ ಇತರ ಷರತ್ತುಗಳನ್ನು ಹೊಂದಿರುವ ಅಂಥವುಗಳು ತಿರಸ್ಕೃತವಾಗಲು ಅರ್ಹವಾಗುವುವು (ಕ್ಲಾಜ್ - 6 ಕಾಂಟ್ರಾಕ್ಟ್‌ನ ಷೆಡ್ಯೂಲ್ ಪಿಡಬ್ಲ್ಯುಜಿ 65 ಎ ಯಿಂದ ನೋಡಿರಿ)

4 ಹತ್ತಿರದ ಅಂಚೆ ಕಚೇರಿಯಿಂದ ಕೊಡಲಾದ ಟೈಂ ಠೇವಣಿಗಳ ರೂಪದಲ್ಲಿ ಮಾತ್ರ ಅರ್ನೆಸ್ಟ್ ಹಣ ಠೇವಣಿಯ ಹಣವನ್ನು ಪಾವತಿ ಮಾಡಬೇಕು.

5 ಈ ಪ್ರಕಟಣೆ ಒಪ್ಪಂದದ ಒಂದು ಭಾಗ ಸಹ ಆಗಿದೆ.

6 ಹೆಚ್ಚು ವಿವರಗಳು ಏನಾದರು ಬೇಕಾಗಿದ್ದಲ್ಲಿ ಈ ಕಚೇರಿಯಿಂದ ಪಡೆಯಬಹುದು.

ಸೀ ನಂ	ಕೆಲಸದ ಹೆಸರು	ಟೆಂಡರ್‌ಗೆ ಇರುವ ಕೆಲಸದ ಅಂದಾಜು ದರ	ಇ ಎಂ ಡಿ ಶೇ 1ರಂತೆ	ಮುಳೆಗಾಲ ಸೇರಿ ಕೆಲಸ ಮುಗಿಸಲು ಕಾಲಾವಧಿ
1	2	3	4	5
1	ಹೆಚ್ ಡಿ ಕೋಟೆ ತಾಲ್ಲೂಕಿನ ಕಬಿನಿ ಬಲದಡದ ಮೈಲಿ - 17, ಗ್ರೀ 17 ರಿಂದ 23 ರ ವರೆಗೆ ಆರ್ ಸಿ ಸಿ ಕವರ್ ಡಕ್ಟ್ ನಿರ್ಮಿಸುವುದು	39,35,000	39,350	—
2	ಡಿಟೋ ಮೈಲಿ 17 ಗ್ರೀ 24 ರಿಂದ 30	39,46,000	39,460	—
3	ಡಿಟೋ ಮೈಲಿ 21 ಗ್ರೀ 41 ರಿಂದ 48 ಡಿಟೋ	47,95,000	47,950	—
4	ಡಿಟೋ ಮೈಲಿ - 22 ಗ್ರೀ 1 ರಿಂದ 8 ಡಿಟೋ	45,61,000	45,610	—
5	ಡಿಟೋ ಮೈಲಿ-29 ನಂಜನಗೂಡು ತಾಲ್ಲೂಕಿನ ಕೆ ಆರ್ ಬಿ ಸಿ ಯ ಗ್ರೀ 33 ರಿಂದ 40 ರ ವರೆಗೆ	46,96,000	46,960	—
6	ಡಿಟೋ ಮೈಲಿ-29 ಗ್ರೀ 41 ರಿಂದ 46 ಡಿಟೋ	32,00,000	32,000	—

ಸಹಿ/- ಎಕ್ಸಿಕ್ಯುಟೀವ್ ಇಂಜಿನಿಯರ್, ಕೆ. ಸಿ. ನಿಭಾಗ, ಮೈಸೂರು-2.